ದಿನಾಂಕಃ**12-12-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.

ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಪಾಟೀಸವಾಲು ಮಾಡಲು ಅನುಮತಿ ನೀಡಲಾಯ್ತು.

ಪಾಟೀ ಸವಾಲುಃ **1** ನೇ ಎದುರುದಾರರ ಪರ ಶ್ರೀ ಕೆ ಆರ್ ಕೆ ವಕೀಲರಿಂದಃ

ಅಪಘಾತ ಆದ ನಂತರ ನನ್ನ ತಂದೆ ತಾಯಿ 1 ನೇ ಎದುರುದಾರರ ಬಳಿ ಚಿಕಿತ್ಸೆಗಾಗಿ ಹಣ ಬೇಕು ಎಂದು ಕೇಳಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಪಾಲುದಾರರಾದ ಶಬ್ಬೀರ್ ಇವರ ಖಾತೆಗೆ 1 ನೇ ಎದುರುದಾರರು ರೂ.25,000/- ವನ್ನು ಚಿಕಿತ್ಸೆಯ ಸಂಬಂಧ ಪಾವತಿ ಮಾಡಿದ್ದರು ಎಂದು ಉತ್ತರಿಸುತ್ತಾರೆ. ನಮ್ಮ ತಂದೆ ತಾಯಿ 1 ನೇ ಎದುರುದಾರರ ಬಳಿ ರೂ.20,000/- ಹಣವನ್ನು ನಗದಾಗಿ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆ ತಾಯಿ ರೂ.20,000/- ಹಣ ಪಡೆದುಕೊಂಡಿದ್ದರು ಸಹ ನಾನು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 1 ನೇ ಎದುರುದಾರರಿಗೆ ರೂ.45,000/- ಹಣ ಕೊಡಲು ಬಾಧ್ಯಸ್ಥರು ಇರುತ್ತೇನೆ ಎಂದರೆ ಸರಿಯಲ್ಲ. ನಾನು ರೂ.45,000/- ಹಣ ತೆಗೆದುಕೊಂಡಿದ್ದರೂ ಸಹ ಕೇವಲ ರೂ.25,000/- ಹಣ ತೆಗೆದುಕೊಂಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ